ಇಲ್ಲ) ಅಲ್ಲೇ ಕೋಣೆಯಲ್ಲಿ ನಿಂತಿದ್ದರು. ಕುವೆಂಪು ಅವರು ಮೆಲ್ಲನೆ ಎದ್ದು ತಮ್ಮ ಪ್ರಿಯ ಪತ್ನಿಯವರ ಪಾದಗಳನ್ನು ಮುಟ್ಟಿ, ಕಣ್ಣಿಗೆ ಒತ್ತಿಕೊಂಡು ನಮಸ್ಕರಿಸಿದರು. ನಂತರ ಪುನಃ ಕುರ್ಚಿಯಲ್ಲಿ ಕುಳಿತು ಸ್ತೋತ್ರಗಳನ್ನು ಹೇಳಿಕೊಳ್ಳತೊಡಗಿದರು. ಈ ಅಪರೂಪದ, ಅಭೂತಪೂರ್ವ ವಿದ್ಯಮಾನಕ್ಕೆ ನಾನು ಅವತ್ತು ಸಾಕ್ಷಿಯಾಗಿದ್ದೆ. ಇದನ್ನು ನೋಡಿ ನನಗೆ ಮತ್ತು ಶ್ರೀರಾಮ್‌ಗೆ ಆದ ವಿಚಿತ್ರ ಅನುಭವವನ್ನು ಪದಗಳಲ್ಲಿ ವಿವರಿಸಲು ಸಾಧ್ಯವೇ ಇಲ್ಲ. ಆಮೇಲೆ, ಹೇಮಾವತಿಯವರ ದೇಹದೊಡನೆ ಕುವೆಂಪು ಅವರ ಜೊತೆ ಚಿತಾಗಾರಕ್ಕೆ ಹೋದೆವು. ಇನ್ನೇನು ಚಿತಾಗಾರ ಚಾಲನೆ ಆಗಬೇಕಿತ್ತು. ಆಗ ಮೈಸೂರಿನಲ್ಲಿದ್ದ ಹೇಮಾವತಿ ಅವರ ಅಕ್ಕನ ಮಗಳು ನನಗೆ, 'ನೀವು ಹೇಳಿ... ಕೊನೇ ಬಾರಿ ಮುಖ ತೋರಿಸಲಿ' ಎಂದಾಗ, ನಾನು ಪ್ರಭುಶಂಕರ್ ಅವರ ಹತ್ತಿರ ಹೋಗಿ ಇದನ್ನು ಬಿನ್ನವಿಸಿಕೊಂಡೆ. ಅವರು ಕುವೆಂಪು ಅವರ ಬಳಿ ಹೋಗಿ, ಅವರನ್ನು ಮೆಲ್ಲಗೆ ಮೆಟ್ಟಿಲು ಹತ್ತಿಸಿ ಚಿತಾಗಾರದ ಬಾಗಿಲಿಗೆ ತಂದು ಗೌರವದ ಪತ್ನಿಯ ದರ್ಶನವನ್ನು ಕುವೆಂಪು ಅವರಿಗೆ ಮಾಡಿಸಿದರು.

ಅನಂತರ, ದೇಜಗೌ ಅವರು ನಾನು ಮತ್ತು ಇನ್ನು ಕೆಲವರಿಗೆ ಹೇಳಿ ಹೇಮಾವತಿ ಅವರ ಕುರಿತು ಲೇಖನ ಬರೆಸಿ ಪುಸ್ತಕ ಮಾಡಿದರು. ಒಮ್ಮೆ ನಾನು 'ಉದಯರವಿ'ಗೆ ಹೋದಾಗ ಕುವೆಂಪು ಅವರು 'ಪದ್ಮಾ... ಅಮ್ಮ ಅವರ ಬಗ್ಗೆ ನೀವು ಬರೆದ ಲೇಖನ ಓದಿದೆ, ಕಣ್ಣೀರು ಬಂತು' ಎಂದರು. ನನಗೆ ದಿಗ್ಭ್ರಮೆ ಆಯ್ತು. ಮುಂದೆ, 'ರಸಋಷಿಗೆ ನಮನ' ಎಂಬ ಕಾರ್ಯಕ್ರಮವನ್ನು 'ಈ ಟೀವಿ'ಯವರು ಮಾಡಿದರು. ಜಯಂತ ಕಾಯ್ಕಿಣಿ ಅದನ್ನು ನಡೆಸಿಕೊಟ್ಟರು. ಅದರಲ್ಲಿ ನನಗೆ ಮಾತಾಡುವ ಅವಕಾಶ ಸಿಕ್ಕಿದಾಗ ಮೇಲಿನ ಘಟನೆಯನ್ನ ಹೇಳಿದೆ. ಈ ಎಪಿಸೋಡು ಟೀವಿಯಲ್ಲಿ ಬಂದಾಗ ಕವಿ ಸುಬ್ಬು ಹೊಲೆಯಾರ್ ಅವರು ಜಯಂತ್ ಅವರಿಗೆ ಕರೆ ಮಾಡಿ, ಕುವೆಂಪು ಅವರು ಸ್ತ್ರೀಚೇತನಕ್ಕೆ ತೋರಿದ ಅಸೀಮ ಗೌರವವನ್ನು ಕೇಳಿ ಭಾವಪರವಶರಾಗಿ ಕಣ್ಣೀರಾದ ಬಗ್ಗೆ ತಿಳಿಸಿದರು. ನನ್ನ ಕೆಲಸವನ್ನು ಸರಿಯಾಗಿ ಮಾಡಿದ ತೃಪ್ತಿ ನನಗೆ ಆ ಕ್ಷಣ... ಮತ್ತು ಈಗಲೂ...

**◆ ತೇಜಸ್ವಿಯವರ ಜೊತೆಗಿನ ನಿಮ್ಮ ಒಡನಾಟದ ಕುರಿತು ನೀವು ಈಗಾಗಲೇ ಬರೆದಿದ್ದೀರಿ. ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಲೇಬೇಕಾದ್ದು ಅನ್ನುವಂತದ್ದು ಏನಾದರೂ ಇದೆಯಾ?**

ತೇಜಸ್ವಿಯವರ ಒಡನಾಟ ನೆನೆಸಿಕೊಂಡ್ರೆ... ಎಷ್ಟು ದೊಡ್ಡ ಲೋಕದೊಳಗೆ ನಾನು ಬದುಕಿಬಿಟ್ಟೆ, ಇದು ನನ್ನ ಅದೃಷ್ಟ ಅನ್ನಿಸುತ್ತೆ. ಇಲ್ಲ ಅಂದಿದ್ರೆ ಸುಮ್ನೆ ಎಲ್ಲೋ ತಿಂಡಿ, ಅಡುಗೆ ಮಾಡಿಕೊಂಡು, ಸಂಸಾರ ತೂಗುಸ್ಕೊಂಡು ಇದ್ದು ಬಿಡ್ತಿದ್ದೆನೇನೋ... ಅವರ ಜೊತೆಗಿನ ಅನುಭವಗಳು ಮನುಷ್ಯಳಾಗಿ ಹುಟ್ಟಿದ್ದಕ್ಕೆ ಸಾರ್ಥಕ ಅಂತ ಮನಸ್ಸು ತುಂಬಿಕೊಳ್ಳುತ್ತೆ... ಅವರ ಬರಹಗಳಲ್ಲಿ ಬರೋ ಮಾರ ಅನ್ನೋ ವ್ಯಕ್ತಿ ಹೆಣೆದುಕೊಟ್ಟ ಬಿದಿರಿನ ಬುಟ್ಟಿ, ಚಿಬ್ಬಲು ಈಗಲೂ ನನ್ನ ಹತ್ರ ಇದೆ... ಅವರ ಮನೆ ನಾಯಿ 'ಕಿವಿ'ಯ ಮಗ ನಮ್ಮ ಮನೆಯಲ್ಲಿ ಬೆಳೀತು... ಈ ಮಾರನ ವಿಷಯ ಒಂದು ಈಗ ನೆನಪಾಗ್ತಾ ಇದೆ ನೋಡಿ... ಮಾರ ಒಂದು ದಿನ ಬಂದು ತೇಜಸ್ವಿ ಅವರ ಮಗಳು ಈಶಾನ್ಯೆ ಹತ್ರ 'ಇದೇ ಕೊನೆ ಸರ್ತಿ ನಾನು ನಿಮ್ಮನೆಗೆ ಬರದು, ಅಯ್ಯಾವ್ರ ಒಂದು ಶರ್ಟು ಕೊಡಿ' ಅಂತ ತೇಜಸ್ವಿಯವರ ಬಟ್ಟೆಯನ್ನ ಕೇಳಿ ಇಸಿದುಕೊಂಡು ಹೋದನಂತೆ. ಇದಾದ ಒಂದೆರಡು ದಿನದಲ್ಲಿ ಅವನು ತೀರಿಕೊಂಡ. ಈ ತರದ ಎಷ್ಟೊಂದು ಘಟನೆಗಳು ಇವೆ... ಇವನ್ನೆಲ್ಲ ಏನು ಅಂತ ಅರ್ಥ ಮಾಡ್ಕೊಬೇಕು ಅನ್ನೋದು ನಂಗೆ ತಿಳಿಯಲ್ಲ...

ಇನ್ನೊಂದು ಘಟನೆ ನೆನಪಾಗ್ತಾ ಇದೆ: ತೇಜಸ್ವಿಯವರು 'ಲಂಕೇಶ್ ಪತ್ರಿಕೆ'ಗೆ ಏನಾದರೂ ಲೇಖನವನ್ನು ಕಳುಹಿಸೋ ಮೊದಲು ಅದನ್ನು ಶ್ರೀರಾಮ್ ಅವರಿಗೆ ಕಳಿಸ್ತಾ ಇದ್ರು. ಆಗೆಲ್ಲ ಈಗಿನ ಹಾಗೆ ಡಿಟಿಪಿ, ಕಂಪ್ಯೂಟರ್ ಇತ್ಯಾದಿ ಬಳಕೆ ಇರಲಿಲ್ಲವಲ್ಲ... ಆಗ ಜಲ್ಲಿ ಕಾಗದ ಅಂತ ಇತ್ತು. ತೆಳ್ಳಗೆ ಗಾಳಿಪಟ ಮಾಡ್ತಾ ಇದ್ವಲ್ಲ ಅಂತ ಕಾಗದ ಅದು... ತೇಜಸ್ವಿ ಅದರಲ್ಲಿ ಬರೀತಾ ಇದ್ರು. ಶ್ರೀರಾಮ್ ಅವರು ತೇಜಸ್ವಿ ಕಳಿಸಿದ್ದನ್ನ ಓದಿ, ಬೇರೆ ಹಾಳೆಗೆ ಕಾಪಿ ಮಾಡಿ ಪತ್ರಿಕೆಗೆ ಕಳಿಸೋ ಕೆಲಸ ಮಾಡ್ತಿದ್ರು. 'ಪರಿಸರದ ಕತೆ'ಯಲ್ಲಿ ಇರೋ ಮೊದಲನೆ ಲೇಖನವನ್ನ ತೇಜಸ್ವಿ ಬರೆದು ಕಳಿಸಿ ಜೊತೆಗೆ ಶ್ರೀರಾಮ್‌ಗೆ ಒಂದು ಟಿಪ್ಪಣಿಯನ್ನೂ ಬರೆದಿದ್ರು, ಅದೇನಂದ್ರೆ, 'ನೋಡಿ, ನೀವು ಗೌರವಾನ್ವಿತ ಕಾಲೇಜಿನ